ರಾಜ್ಯದ ಕೃಷಿ ವಿದ್ಯಾನಿಲಯದಲ್ಲಿನ "ತಾತ್ಕಾಲಿಕ ನೌಕರರ" ಸೇವೆಯನ್ನು ಖಾಯಂಗೊಳಿಸುವುದು

4693 (5393) : ಶ್ರೀ ಶಂಕರಲಿಂಗೇಗೌಡ ಹೆಚ್. ಎಸ್. (ಚಾಮರಾಜ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದ ಕೃಷಿ ವಿಶ್ವವಿದ್ಯಾಲಯದಲ್ಲಿ ಕೆಲಸ ನಿರ್ವಹಿಸುತ್ತಿರುವ ಅಧ್ಯಾಪಕ ಮತ್ತು ಆದ್ಯಾಪಕೇತರ ನೌಕರರ ಪೈಕಿ ಎಷ್ಟು ಮಂದಿ ತಾತ್ಕಾಲಿಕವಾಗಿ ಕೆಲಸ ನಿರ್ವಹಿಸುತ್ತಿರುವವರು ಯಾರು ಯಾರು? (ಉತ್ತರ ನೀಡುವುದು)

ಆ) ಸದರಿ ನೌಕರರು ಯಾವ ಯಾವ ಹುದ್ದೆಯಲ್ಲಿ ಎಷ್ಟೆಷ್ಟು ವರ್ಷಗಳಿಂದ ಕೆಲಸ ನಿರ್ವಹಿಸುತ್ತಿರುವರು;

ಇ) ಸದರಿ ನೌಕರರನ್ನು ಖಾಯಂ ಮಾಡುವ ಬಗ್ಗೆ ಸರಕಾರದ ನಿಲುವೇನು?

ಶ್ರೀ ವಿ.ಎಸ್. ಕೌಜಲಗಿ (ಕೃಷಿ ಸಚಿವರು)

ಅ) ಬೆಂಗಳೂರು ಮತ್ತು ಧಾರವಾಡ ಕೃಷಿ ವಿಶ್ವವಿದ್ಯಾಲಯಗಳಲ್ಲಿ ಅಧ್ಯಾಪಕ ಮತ್ತು ಆದ್ಯಾಪಕೇತರ ಹುದ್ದೆಗಳಲ್ಲಿ ಯಾವುದೇ ತಾತ್ಕಾಲಿಕ ನೌಕರರು ಕೆಲಸ ನಿರ್ವಹಿಸುತ್ತಿಲ್ಲ.

ಆ) ಉದ್ಭವಿಸುತ್ತಿಲ್ಲ.

ಇ) ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ ರೋಗಗಳಿಂದ ತೋಟಗಾರಿಕೆ ಬೆಳೆಗಳ ನಷ್ಟ

4694 (5393) : ಶ್ರೀ ಶಂಕರಲಿಂಗೇಗೌಡ ಹೆಚ್. ಎಸ್. (ಚಾಮರಾಜ) ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಕಳೆದ ವರ್ಷದಲ್ಲಿ ತೋಟಗಾರಿಕೆ ಬೆಳೆಗಳ ಪೈಕಿ ಯಾವ ಯಾವ ಬೆಳೆಗಳಿಗೆ ಯಾವ ಯಾವ ರೀತಿಯ ರೋಗ ತಗುಲಿ ಎಷ್ಟೆಷ್ಟು ಪ್ರಮಾಣದ ನಷ್ಟ ಉಂಟಾಯಿತು; ನಷ್ಟದ ಮೌಲ್ಯವೆಷ್ಟು;

ಆ) ಈ ರೋಗಗಳ ತಡೆಗೆ ಸರ್ಕಾರ ಯಾವ ಯಾವ ಕ್ರಮ ಕೈಗೊಂಡಿದೆ; ನಷ್ಟಕ್ಕೊಳಗಾದ ರೈತರಿಗೆ ಯಾವ ರೀತಿಯ ಅನುಕೂಲ ಕಲ್ಪಿಸಿಕೊಡಲಾಯಿತು;

ಇ) ರೋಗ ತಡೆಗೆ ಇನ್ನೂ ಯಾವ ರೀತಿಯ ಪರಿಣಾಮಕಾರಿ ಕ್ರಮ ಕೈಗೊಳ್ಳಲಾಗುವುದು?

ಶ್ರೀ ಎಂ. ಶಿವಣ್ಣ (ತೋಟಗಾರಿಕೆ ಸಚಿವರು)

ಅ) ರಾಜ್ಯದ ಪ್ರಮುಖ ತೋಟಗಾರಿಕೆ ಬೆಳೆಗಳಿಗೆ ಬೀಳುವ ಕೀಟ ಮತ್ತು ರೋಗಗಳು ಕೆಳಕಂಡಂತಿರುತ್ತವೆ.

ಬೆಳೆ		ರೋಗ ಮತ್ತು ಕೀಟಗಳು
ಮಾವು	–	ಜಿಗಿ ಹುಳು, ಬೂದಿರೋಗ
ಬಾಳೆ	–	ಪನಾಮ ಸೊರಗು ರೋಗ, ಗಡ್ಡೆಕೊಳೆ ರೋಗ, ಜಂಟಿ ಟಾಪ್, ಎಲೆ ಚುಕ್ಕೆ ರೋಗ.
ದ್ರಾಕ್ಷಿ	–	ಬೂದಿರೋಗ, ಅಂಥ್ರಾಕ್ನೋಸ್
ದಾಳಿಂಬೆ	–	ಬ್ಯಾಕ್ಟೀರಿಯಲ್ ಬ್ಲೈಟ್, ಹಣ್ಣು ಕೊರಕ
ನಿಂಬೆ ಜಾತಿ	–	ಕ್ಯಾಂಕರ್, ಡೈಬ್ಯಾಕ್